

ಮಾಡಲಿಕ್ಕೆ ಟೈಮ್ ಸಿಗಲಿಲ್ಲೇನು ನಿನಗ? ವೀರೇಶನ ಫೋನ್ ಇತ್ತಲಾ...'

'ಎವ್ವಾ ನನ್ನ ಫೋನಿನ್ಯಾಗ ಕರನ್ಸಿ ಇರಾಕಿಲ್ಲೆವ್ವಾ... ಎಲ್ಲಿಂದರ ಮಾಡಾಕ ಬರ್ತಿತ್ತು... ಆದರ... ಸೂಕ್ಷ್ಮ ಇಚಾರಾ... ಎದರಾಬದರಾ ಮಾತ ಆದರ ಚೊಲೊ ಅಂತ ಸುಮ್ಮಕಾದ್ವಿ... ನಾ ಬರೋಬ್ಬರಿ ಯಾಳೇಕ್ಕ ಬಂದೆ ಅಂತ ಅನಾಹುತ ತಪ್ತು... ನಮಗೂ ತಿಳೀಲಿಲ್ಲ ಒಮ್ಮೆಲೆ ಏನಮಾಡಬೇಕಂತ... ನೀವೂ ಮನ್ಯಾಗಿರ್ಲಿಲ್ಲ... ಹುಡಗಿ ಹೆದರಿತ್ತು... ಅದಕ ನನ್ನ ಮನಿಗೆ ಕರಕೊಂಡೋದೆ... ಮುಂಜೇನಿ ಬರೂಮುಂದ ದಾರ್‍ಯಾಗ ಅಪ್ಪಾಗೋಳೂ ಸಿಕ್ರು...' ತುಂಡು ಮಾತುಗಳನ್ನು ಅರ್ಧಕ್ಕೇ ನಿಲ್ಲಿಸಿದ ವೀರೇಶ.

'ಆದ್ರ ಆತೇನು ಅಂತ... ಅದನ್ನರ ಹೇಳ್ರಿ.'

'ಏನಿಲ್ಲೇಳಕ್ಕಾ... ನಾ... ಅಪ್ಪಾನ ಗೂಡ ಊರಿಗೆ ಹೋಕ್ಕೇನಿ...' ಗೌರಿ ಮೌನವಾಗಿ ನೆಲ ನೋಡತೊಡಗಿದಳು. ಬಾಳಣ್ಣನತ್ತ ನೋಡಿದರೆ, ಆತನೂ ನೆಲ ನೋಡುತ್ತಿದ್ದ. ಹಾಗಾದರೆ... ಆತನಿಗೂ ತಿಳಿದಿದೆ ಆದದ್ದು... ರಾಜೂನಿಗೂ... ಹೇಳಲು ಹಿಂಜರಿಯುತ್ತಿದ್ದಾರೆ... ಅಂದರೆ ತಮ್ಮ ಮನೆಯಲ್ಲೇ... ಏನಾದರೂ ಆಯಿತೆ? ಶಿರೀನ್‌ಳ ಎದೆ ಡವಡವಿಸತೊಡಗಿತು. 'ಹುಡಗಿ ಥೊಡ್ಡಾಕ್ಯಾಗ್ಯಾಳ... ಮೈಕೈ ತುಂಬಕೊಂಡು ಕಣ್ಣು ಕುಕ್ಕೂಹಂಗ ಆಗ್ಯಾಳ... ಬೆಂಕಿ ಹತ್ರ ಬೆಣ್ಣೆ ಇಡೂದು ಶಾಣ್ಯಾತನಾ ಅಲ್ಲಾ... ನಾಳೆ ಒಂದ ಹೋಗಿ ಒಂದ ಆದೀತ್ನೋಡು...' ಅವ್ವ ಆಡಿದ ಮಾತುಗಳು ಕಿವಿಯಲ್ಲಿ ಪ್ರತಿಧ್ವನಿಸತೊಡಗಿದವು... ಅಕ್ಕಪಕ್ಕದವರೊ? ಮನೆಯವರೊ?... ಶಿಶಿರನತ್ತ ನೋಡಿದಳು ಶಿರೀನ್. ತನಗೇನೂ ಗೊತ್ತಿಲ್ಲ ಎನ್ನುವಂತೆ ಆತ ಕೈಮಾಡಿದ. ಕಣ್ಣುಗಳು ನಿರ್ಮಲವಾಗಿದ್ದವು... ಛೆ... ಆತನಲ್ಲ ಅನಿಸಿತು. ಅಕ್ಕಪಕ್ಕದವರು ಹೀಗೆ ಮನೆಗೆ ನುಗ್ಗಿ... ಅದೂ ಶಿಶಿರ, ಮಾವ ಮಕ್ಕಳು ಎಲ್ಲರೂ ಮನೆಯಲ್ಲಿರುವಾಗ... ಸಾಧ್ಯವಿಲ್ಲ. ಮತ್ತಾರು? ಇಷ್ಟು ಗದ್ದಲವಾದರೂ ಮಾವನವರೇಕೆ ಹೊರಗೆ ಬಂದಿಲ್ಲ? ಶಿರೀನ್‌ಳ ದೃಷ್ಟಿ ಮಾವನ ಕೋಣೆಯ ಮುಚ್ಚಿದ ಬಾಗಿಲಿನತ್ತ ಹರಿದು, ಗೌರಿಯತ್ತ ತಿರುಗಿತು. ಅವಳಿಗಲ್ಲಿ ಉತ್ತರ ಸಿಕ್ಕಿತು. ವೀರೇಶನತ್ತ ನೋಡಿದರೆ, ಆತ ಹೌದೆನ್ನುವಂತೆ ಗೋಣಾಡಿಸಿದ. ರಾಜು, ಬಾಳಣ್ಣನ ಮುಖದಲ್ಲೂ ಸಮ್ಮತಿ. ಮಾವ?... ಮಾವ? ಛೆ... ಇರಲಿಕ್ಕಿಲ್ಲ...